ಆದರೆ, ಅನುವಾದ ಮಾಡಲು ಆ ಪದಗಳ ವ್ಯುತ್ಪತ್ತಿಯನ್ನು ಹುಡುಕಿದಾಗ ಹೇಗೆ ಅವೆಲ್ಲವೂ ಶಿವನ ಭಿನ್ನ ಭಿನ್ನ ಗುಣಗಳನ್ನು/ಕಾರ್ಯಗಳನ್ನು ವಿವರಿಸುತ್ತವೆ ಎಂಬುದು ಗೊತ್ತಾಯಿತು: ಶರ್ವ = ಸಂಹರಿಸುವವನು/ ನಾಶಮಾಡುವವನು; ಸರ್ವೇಶ = ಎಲ್ಲರನ್ನೂ/ ಎಲ್ಲವನ್ನೂ ಆಳುವವನು; ಶಂಕರ = ಒಳ್ಳೆಯದನ್ನು ಮಾಡುವವನು; ಮಾರಾರಿ = ಮಾರನ/ ಮನ್ಮಥನ ಶತ್ರು; ಭವಹರ = ಜನನ-ಮರಣ-ಪುನರ್ಜನನ- ವೃತ್ತವನ್ನು ಕಡಿಯುವವನು, ಇತ್ಯಾದಿ.

**3. ಅರ್ಥೈಸುವಿಕೆ:**

ಇಂಗ್ಲಿಷ್ ಭಾಷೆ-ಸಾಹಿತ್ಯಗಳು ಭಾರತದಲ್ಲಿ ಬೇರೂರುವ ತನಕ ಭಾರತೀಯ ಭಾಷೆಗಳಲ್ಲಿ ಪ್ರಶ್ನಾರ್ಥಕ ಚಿಹ್ನೆ, ಆಶ್ಚರ್ಯಸೂಚಕ ಚಿಹ್ನೆ, ಉದ್ಧರಣ ಚಿಹ್ನೆ, ಇತ್ಯಾದಿ ವಿರಾಮ ಚಿಹ್ನೆಗಳು (punctuation marks) ಬರವಣಿಗೆಯಲ್ಲಿರಲಿಲ್ಲ; ಕೇವಲ ಒಂದು ವಾಕ್ಯದ/ ಪದ್ಯದ ಅರ್ಧ ವಿರಾಮ ಹಾಗೂ ಪೂರ್ಣ ವಿರಾಮ ಚಿಹ್ನೆಗಳಿದ್ದುವು. ಸಂದರ್ಭಾನುಸಾರಿ ವಾಕ್ಯಗಳನ್ನು ಅರ್ಥಮಾಡಿಕೊಳ್ಳಬೇಕಾಗಿತ್ತು. ಕೆಲವು ಸಂದರ್ಭಗಳಲ್ಲಿ ವಿರಾಮ ಚಿಹ್ನೆಗಳಿಲ್ಲದ ಒಂದು ಪದ್ಯವನ್ನು ಅರ್ಥೈಸುವುದು ಎಷ್ಟು ಜಟಿಲ ಎಂಬುದು ಕುಮಾರವ್ಯಾಸನನ್ನು ಅನುವಾದಿಸುವಾಗ ನನಗೆ ಗೊತ್ತಾಯಿತು.

ದ್ರೌಪದಿ ಸ್ವಯಂವರದ ಸಂದರ್ಭದಲ್ಲಿ, ಎಲ್ಲಾ ಕ್ಷತ್ರಿಯರೂ ಸೋತು ಹೋದಾಗ, ಕೃಷ್ಣ-ಬಲರಾಮ ಇವರ ನಡುವೆ ಸಂಭಾಷಣೆ ನಡೆಯುತ್ತದೆ; ಕೋಪದಿಂದ ತಾನೇ ಬಿಲ್ಲನ್ನು ಮುರಿದು ಹಾಕುತ್ತೇನೆ ಎಂದು ಎದ್ದ ಬಲರಾಮನನ್ನು ಕೃಷ್ಣ ಸಮಾಧಾನ ಮಾಡುತ್ತಾನೆ. ಆ ಸಂದರ್ಭದಲ್ಲಿ ಈ ಒಂದು ಷಟ್ಪದಿಯು ಬರುತ್ತದೆ:

ಏನಹರು ನಿಮಗಿಂದು ಕುಂತೀ
ಮಾನಿನಿಯರತ್ತೆಯರಲೇ ತ
ತ್ಸೂನುಗಳು ಮೈದುನರು ತತ್ಪತ್ನಿಯರು ತಂಗಿಯರು
ಸಾನುರಾಗವೆ ಮನಕೆ ಸಂಶಯ
ವೇನಿದಕೆ ತಪ್ಪಿಲ್ಲ ಕುಂತೀ
ಸೂನುಗಳು ದ್ರೌಪದಿಗೆ ರಮಣರು ನೋಡಿ ನೀವೆಂದ (1: 14: 28)

ಈ ಪದ್ಯವನ್ನು ಪ್ರಶ್ನೋತ್ತರಗಳಂತೆ ಭಾವಿಸಿ, ಕೃಷ್ಣನು ಕೇಳುವ ಪ್ರಶ್ನೆಗಳಿಗೆ ಬಲರಾಮನು ಉತ್ತರಿಸುತ್ತಾನೆ ಎಂದು ಅರ್ಥೈಸಬಹುದು:

ಕೃಷ್ಣ: ನಿಮಗೆ ಕುಂತಿ ದೇವಿ ಏನಾಗಬೇಕು?
ಬಲರಾಮ: ಅತ್ತೆಯಲ್ಲವೆ!
ಕೃಷ್ಣ: ಅವರ ಮಕ್ಕಳು?
ಬಲರಾಮ: ಮೈದುನರು.

..........

ಅಥವಾ, ಪ್ರಶ್ನೆಗಳನ್ನು 'ಅಲಂಕಾರಿಕ ಪ್ರಶ್ನೆಗಳು' (Rhetorical questions) ಎಂದು ಗ್ರಹಿಸಿ, ಇಡೀ ಪದ್ಯದಲ್ಲಿರುವ ಮಾತುಗಳು ಕೃಷ್ಣನು ಬಲರಾಮನನ್ನು ಸಮಾಧಾನಗೊಳಿಸಲು ಆಡುವ ಮಾತುಗಳು ಎಂದೂ ಗ್ರಹಿಸಬಹುದು:

ಕೃಷ್ಣ: ಕುಂತಿ ದೇವಿ ನಿಮಗೇನಾಗಬೇಕು? ಅತ್ತೆ ತಾನೆ! ಅವರ ಮಕ್ಕಳು? ಮೈದುನರು, ಮತ್ತು ಮೈದುನರ ಪತ್ನಿಯರು ನಿಮ್ಮ ತಂಗಿಯರಾಗುವುದಿಲ್ಲವೆ? ಆದುದರಿಂದ ಸಂಶಯಪಡಬೇಡಿ...

ನನಗೆ ಎರಡನೆಯ ಬಗೆಯ ಅರ್ಥೈಸುವಿಕೆಯೇ ಸರಿ ಎನಿಸಿತು; ಕಾರಣ, ಯಾರನ್ನೂ ಮರುಳು ಮಾಡುವಂತಹ ಕೃಷ್ಣನ ಮಾತುಗಾರಿಕೆಗೆ ಈ ಪದ್ಯವು ಉತ್ತಮ ನಿದರ್ಶನ. ಆದರೆ ಕೆಲವು ವ್ಯಾಖ್ಯಾನಕಾರರು ಈ ಪದ್ಯವನ್ನು ಸಂಭಾಷಣೆಯಂತೆ ದಾಖಲಿಸಿದ್ದರು. ಪರಿಣಾಮತಃ, ಮತ್ತೆ ಮತ್ತೆ ಮುಖ್ಯ ಸಂಪಾದಕರೊಡನೆ ಈ ವಿಷಯವನ್ನು ಕುರಿತು ಸಾಕಷ್ಟು ಚರ್ಚೆಯಾಯಿತು. ಕೊನೆಗೆ ಎರಡನೆಯ ಅರ್ಥೈಸುವಿಕೆಯನ್ನೇ ಇಟ್ಟುಕೊಂಡೆವು.

ಇದೇ ಬಗೆಯ ಸಮಸ್ಯೆ ನನಗೆ ಅವಧಿ ಭಾಷೆಯಲ್ಲಿ ಜಾಯಸಿ ಬರೆದಿರುವ 'ಪದ್ಮಾವತ್' ಮಹಾಕಾವ್ಯದಿಂದ ಕೆಲವು ಭಾಗಗಳನ್ನು ಅನುವಾದಿಸುವಾಗ ಎದುರಾಗಿತ್ತು; ಯಾರು ಯಾರಿಗೆ ಏನು ಹೇಳುತ್ತಾರೆ ಅಥವಾ ಕೇಳುತ್ತಾರೆ